# ಅಧಿಕಾರ ಸ್ವೀಕರಿಸಿದ ನಳಿನ್ ಕುಮಾರ್

## ಸಿಎಂ ಬಿಎಸ್‌ವೈರಿಂದ ಅಧಿಕಾರ ಹಸ್ತಾಂತರ

**ಬೆಂಗಳೂರು:** ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಕಾರ್ಯಕರ್ತರು, ಬಿಜೆಪಿ ಪರ ಘೋಷಣೆ, ಕೇಸರಿ ಬಾವುಟದ ಹಾರಾಟದ ಮಧ್ಯೆ ರಾಜ್ಯ ಬಿಜೆಪಿ ನೂತನ ಅಧ್ಯಕ್ಷರಾಗಿ ಸಂಸದ ನಳಿನ್ ಕುಮಾರ್ ಕಟೀಲ್ ಅಧಿಕಾರ ಸ್ವೀಕರಿಸಿಕೊಂಡರು.

ಮಲ್ಲೇಶ್ವರದ ಬಿಜೆಪಿ ಕಚೇರಿಯ ಮುಂಭಾಗದ ರಸ್ತೆಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರೂ ಆಗಿರುವ ಮುಖ್ಯಮಂತ್ರಿ ಯಡಿಯೂರಪ್ಪ ಅವರು ನೂತನ ರಾಜ್ಯಾಧ್ಯಕ್ಷರಿಗೆ ಪಕ್ಷದ ಬಾವುಟ ನೀಡುವ ಮೂಲಕ ಅಧಿಕಾರ ಹಸ್ತಾಂತರ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಟೀಲ್, ನಾನು ಆರೆಸ್ಸೆಸ್‌ನ ಒಬ್ಬ ಸ್ವಯಂಸೇವಕ. ನಾನು ಶ್ರೇಷ್ಠ ಜ್ಞಾನಿಯಲ್ಲ, ವಿದ್ವಾಂಸ, ಸಾಧಕನೂ ಅಲ್ಲ. 'ನುಡಿಯಲಾರದೆ ತೊದಲುತ್ತಿದ್ದೆನು, ನುಡಿಯ ಕಲಿಸಿತು ಸಂಘವು. ನಡೆಯಲಾರದೆ ತೆವಳುತ್ತಿದ್ದೆನು, ನಡಿಗೆ ಕಲಿಸಿತು ಸಂಘವು...' ಎಂದು ಹೇಳಿದರು.

"ಇಂದು ಬಿಜೆಪಿ ಸ್ವರ್ಣಯುಗದ ಕಾಲದಲ್ಲಿದೆ. ಇಂತಹ ಕಾಲದಲ್ಲಿ ಎಚ್ಚರಿಕೆಯಿಂದಲೇ ರಾಜ್ಯಾಧ್ಯಕ್ಷ ಹುದ್ದೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದೇನೆ. ಹಿರಿಯರ ಮಾರ್ಗದರ್ಶನ, ಕಾರ್ಯಕರ್ತರ ಪ್ರೇರಣೆಯಿಂದ ಬಿಜೆಪಿಯನ್ನು ಸರ್ವವ್ಯಾಪಿ, ಸರ್ವಸ್ಪರ್ಶಿ ಮಾಡುವ ವಿಶ್ವಾಸವಿದೆ" ಎಂದು ಹೇಳಿದರು.

ಅಧಿಕಾರವನ್ನು ಹಸ್ತಾಂತರಿಸಿ ಮಾತನಾಡಿದ ಯಡಿಯೂರಪ್ಪ, ಮುಂದಿನ ಮೂರು ವರ್ಷ 10 ತಿಂಗಳ ಅವಧಿಯಲ್ಲಿ ಯಾರೊಬ್ಬರೂ ವಿಶ್ರಾಂತಿ ಪಡೆಯದೆ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಸಂಘಟನೆ ಬಲಪಡಿಸಿ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ 150ಕ್ಕೂ ಹೆಚ್ಚು ಸ್ಥಾನ ಗೆಲ್ಲಬೇಕಿದೆ ಎಂದು ಕರೆ ನೀಡಿದರು.

ಬೆಳಿಗ್ಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ನಳಿನ್ ವೇದಿಕೆ ಪ್ರವೇಶಿಸುತ್ತಿದ್ದಂತೆ ಕಾರ್ಯಕರ್ತರು ಜೈಕಾರ ಹಾಕಿದರು. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಿಂದಲೂ ಅಪಾರ ಸಂಖ್ಯೆಯಲ್ಲಿ ಕಾರ್ಯಕರ್ತರು ಬಂದಿದ್ದರು. ತುಳುವಿನಲ್ಲೇ ಜೈಕಾರ ಹಾಕುತ್ತಿದ್ದರು. ಬಿಜೆಪಿ ಕಚೇರಿ ಮುಂಭಾಗದ ರಸ್ತೆಯಲ್ಲಿ ಪಕ್ಷದ ಬಾವುಟ ಕಟ್ಟಿ ಅಲಂಕರಿಸಲಾಗಿತ್ತು.



ಸಂಸದ ನಳಿನ್ ಕುಮಾರ್ ಕಟೀಲು ಅವರು ಬಿಜೆಪಿ ನೂತನ ರಾಜ್ಯಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಕ್ಷಣ.

### ಕೇಸರಿ ಆಕರ್ಷಣೆ

**ರಾಜ್ಯಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಲು ಬಂದಿದ್ದ ನಳಿನ್ ಕುಮಾರ್ ಅವರೇ ವೇದಿಕೆಯಲ್ಲಿ ಪ್ರಮುಖ ಆಕರ್ಷಣೆಯಾಗಿದ್ದರು. ಕೇಸರಿ ಬಣ್ಣದ ಕುರ್ತಾ ಧರಿಸಿದ್ದರು. ಹಾಗೆಯೇ ಕಾರ್ಯಕರ್ತರೊಬ್ಬರು ನೀಡಿದ್ದ ಕೇಸರಿ ಬಣ್ಣದ ಮುಂಡಾಸು ಧರಿಸಿ ಕೆಲಕಾಲ ಮಿಂಚಿದರು.**